# ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್ ಅಳವಡಿಸುವ ಯೋಜನೆಗೆ ಪೂರಕ ಮಾಹಿತಿ ಮತ್ತು ಮಾರ್ಗಸೂಚಿಗಳು

ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಜಾಲದಿಂದ ಸಾಂಪ್ರದಾಯಿಕ ವಿದ್ಯುತ್ ಬಳಸುವ ಬದಲು ಸೌರ ವಿದ್ಯುತ್‌ನ್ನು ಪರ್ಯಾಯವಾಗಿ ಬಳಸಬಹುದಾಗಿದೆ. ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ಸಹಯೋಗದೊಂದಿಗೆ ರಾಜ್ಯ ಸರ್ಕಾರವು ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯನ್ನು ಕೆ.ಆರ್.ಇ.ಡಿ.ಎಲ್ ಮುಖಾಂತರ ರಾಜ್ಯ ವ್ಯಾಪ್ತಿಯಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಸಹಯೋಗದೊಂದಿಗೆ ಈಗಾಗಲೇ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಯೋಜನೆಯ ಲಾಭವನ್ನು ರೈತರು ಪಡೆಯಬಹುದಾಗಿದೆ.

ಮಾರ್ಗಸೂಚಿಗಳು:

- ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಸಚಿವಾಲಯ ದ(ಎಮ್.ಎನ್.ಆರ್.ಇ) ಮಾನದಂಡಗಳನ್ವಯ ರೈತರಿಗೆ 5 ಹೆಚ್.ಪಿ ಸಾಮರ್ಥ್ಯದ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಸೌರಘಟಕವನ್ನು ಒದಗಿಸಲಾಗುವುದು, ನೀರೆತ್ತುವ ಒಟ್ಟಾರೆ ಆಳವು **(Dynamic Head)- 70** ಮೀಟರ್‌ಗಳಿಗೆ (230 ಅಡಿ) ಸೀಮಿತಗೊಳಿಸಲಾಗಿದೆ.
- ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಮತ್ತು ಹಾಲಿ ವಿದ್ಯುತ್ ಸಂಪರ್ಕದಲ್ಲಿರುವ ರೈತರ ಕೃಷಿ ಪಂಪ್‌ಸೆಟ್‌ಗಳಿಗೂ ಸಹ ಈ ಯೋಜನೆಯು ಅನ್ವಯಿಸುತ್ತದೆ (ಹಾಲಿ ವಿದ್ಯುತ್ ಸಂಪರ್ಕವನ್ನು ಶಾಶ್ವತ ನಿಲುಗಡೆಗೊಳಿಸಿದ ಬಳಿಕ).
- ಸಾಮಾನ್ಯ ವರ್ಗದ ಫಲಾನುಭವಿಗಳು ಪ್ರತಿ ಸೌರ ಪಂಪ್‌ಸೆಟ್‌ಗೆ ರೂ. ಒಂದು ಲಕ್ಷ ವಂತಿಗೆಯನ್ನು ಡಿ.ಡಿ/ಆರ್.ಟಿ.ಜಿ.ಎಸ್ ಮುಖಾಂತರ ಪಾವತಿಸಬೇಕಾಗಿರುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತ.
- ಸಾಮಾನ್ಯ ವರ್ಗಕ್ಕೆ 1600 ಸಂಖ್ಯೆ, ಪರಿಶಿಷ್ಟ ಜಾತಿಯ ವರ್ಗಕ್ಕೆ 140 ಸಂಖ್ಯೆ ಹಾಗೂ ಪರಿಶಿಷ್ಟ ಪಂಗಡದ ವರ್ಗಕ್ಕೆ 91 ಸಂಖ್ಯೆ, ಒಟ್ಟಾರೆಯಾಗಿ 1831 ಸಂಖ್ಯೆಗಳ ಜಾಲಮುಕ್ತ ನೀರಾವರಿ ಸೌರ ಪಂಪ್‌ಸೆಟ್‌ಗಳನ್ನು ರೈತರಿಗೆ ಅಳವಡಿಸಿಕೊಡಲು ಆನ್‌ಲೈನ್ ಮುಖಾಂತರ "ಮೊದಲು ಬಂದವರಿಗೆ ಮೊದಲ ಆದ್ಯತೆಯ" ಮೇರೆಗೆ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗುವುದು. ತಿರಸ್ಕೃತಗೊಳ್ಳಬಹುದಾದ ಅರ್ಜಿಗಳನ್ನು ಗಮನದಲ್ಲಿರಿಸಿ, ಶೇ. 5 ರಷ್ಟು ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು. ವರ್ಗವಾರು ನೀಡಲಾಗಿರುವ ಉದ್ದೇಶಿತ ಗರಿಷ್ಠ ಅರ್ಜಿಗಳ ಸಂಖ್ಯೆ ತಲುಪಿದ ನಂತರ ಅರ್ಜಿನೊಂದಾವಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದು.

ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಒದಗಿಸಬೇಕಾದ ಅಗತ್ಯ ಮಾಹಿತಿಗಳು:

(ಅ) ಭೂ ಮಾಲಿಕತ್ವವುಳ್ಳ ಫಲಾನುಭವಿಯ ಹೆಸರು (ಆ)ವಾಸಸ್ಥಳ ಮತ್ತು ವಿಳಾಸ: ಗ್ರಾಮ, ಹೋಬಳಿ, ತಾಲ್ಲೂಕು (ಇ)ಆಧಾರ್ ಸಂಖ್ಯೆ (ಈ) ದೂರವಾಣಿ ಸಂಖ್ಯೆ (ಉ) ಜಾತಿಯ ವಿವರ: ಸಾಮಾನ್ಯ/ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ (ಊ) ಭೂ ದಾಖಲೆ ವಿವರಗಳು: RTC, ಸರ್ವೆ ನಂ, ಗ್ರಾಮ, ತಾಲ್ಲೂಕು (ಎ) ಫಲಾನುಭವಿಗಳ ವಂತಿಗೆಯ ವಿವರ: ಡಿಡಿ ಸಂಖ್ಯೆ ಹಾಗೂ ದಿನಾಂಕ (ಡಿ.ಡಿಯನ್ನು MD KREDL ರವರ ಹೆಸರಿಗೆ ಪಡೆಯುವುದು) (ಏ)ಆರ್.ಟಿ.ಜಿ.ಎಸ್ ವಿವರ: ಯು.ಟಿ.ಆರ್ ಸಂಖ್ಯೆ/ಟ್ರಾನ್ಸಾಕ್ಷನ್ ಐಡಿ ಮತ್ತು ದಿನಾಂಕ (ಡಿ.ಡಿ ಮೊತ್ತ: ಸಾಮಾನ್ಯ ವರ್ಗಕ್ಕೆ ರೂ. 1.00 ಲಕ್ಷ, ಪರಿಶಿಷ್ಟ ಜಾತಿ/ಪಂಗಡ ವರ್ಗಕ್ಕೆ ಉಚಿತ) (ಐ) ಅರ್ಜಿದಾರರ ಬ್ಯಾಂಕ್ ಖಾತೆಯ ವಿವರ: ಅರ್ಜಿದಾರರ ಹೆಸರು, ಬ್ಯಾಂಕಿನ ಹೆಸರು, ಬ್ಯಾಂಕ್ ಶಾಖೆ ಹೆಸರು, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್.

## <u>ಅರ್ಜಿ ಸಲ್ಲಿಸುವ ಮುನ್ನ ಅರ್ಜಿದಾರರು ದಯಮಾಡಿ ಮೇಲೆ ತಿಳಿಸಲಾದ ಮಾರ್ಗಸೂಚಿಗಳನ್ನು ಓದಿಕೊಳ್ಳುವುದು</u>

## ಆನ್ ಲೈನ್‌ನಲ್ಲಿ ಅರ್ಜಿಗಳನ್ನು ತುಂಬಲು ಸೂಚನೆಗಳು

ಜಾತಿ ವರ್ಗದ ಆಯ್ಕೆ: * ಸಾಮಾನ್ಯ/ಎಸ್.ಸಿ/ಎಸ್.ಟಿ

ಜಾತಿ ವರ್ಗದ ಆಯ್ಕೆಯ ಸ್ಥಳದಲ್ಲಿ ಅರ್ಜಿದಾರರು ತಮ್ಮ ವರ್ಗವನ್ನು ಆಯ್ಕೆ ಮಾಡಬೇಕು. ಅರ್ಜಿದಾರರು ಸಾಮಾನ್ಯ ವರ್ಗದವರಾಗಿದ್ದರೆ, ಸಾಮಾನ್ಯ ಎಂದು ಆಯ್ಕೆ ಮಾಡಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ್ದರೆ, ಆಯಾ ವರ್ಗದ ಆಯ್ಕೆ ಮಾಡಬೇಕು.

ಟಿಪ್ಪಣಿ:

ಸೌರ ಪಂಪುಸೆಟ್‌ಗಳನ್ನು ಅಳವಡಿಸಲು ವರ್ಗಾವಾರು ಆಹ್ವಾನಿಸಲಾದ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿವೆ:

| ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|
| **1600** | **140** | **91** |

ಆಯಾ ವರ್ಗಕ್ಕೆ ನಿಗಧಿಪಡಿಸಲಾದ ಗುರಿಯು ತಲುಪಿದ ನಂತರ ಅರ್ಜಿ ಸ್ವೀಕೃತಿಯು ಮುಕ್ತಾಯಗೊಳ್ಳುತ್ತದೆ. ಅರ್ಜಿಗಳಲ್ಲಿನ ದೋಷಗಳು, ತಪ್ಪು ಮಾಹಿತಿ ಮತ್ತು ಇತರೆ ಕಾರಣಗಳಿಂದ ತಿರಸ್ಕೃತಗೊಳ್ಳಬಹುದಾದ ಅರ್ಜಿಗಳನ್ನು ಗಮನದಲ್ಲಿರಿಸಿ, ಶೇ. 5 ರಷ್ಟು ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು.

1. ಅರ್ಜಿದಾರರ ಹೆಸರು ಮತ್ತು ಸಂಪರ್ಕ ವಿವರಗಳು
   - (i) ಅರ್ಜಿದಾರರ ಹೆಸರು*: ಅರ್ಜಿದಾರರ ಹೆಸರನ್ನು ಆಧಾರ್ ಕಾರ್ಡ್‌ನಲ್ಲಿರುವಂತೆ ನಮೂದಿಸುವುದು
   - (ii) ತಂದೆ/ಗಂಡನ ಹೆಸರು*: ಅರ್ಜಿದಾರರ ತಂದೆ/ಗಂಡನ ಹೆಸರನ್ನು ನಮೂದಿಸುವುದು.
   - (iii) ದೂರವಾಣಿ ಸಂಖ್ಯೆ*: ಅರ್ಜಿದಾರರನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಯನ್ನು ನಮೂದಿಸುವುದು
   - (iv) ಆಧಾರ್ ಕಾರ್ಡ ಸಂಖ್ಯೆ*: ಅರ್ಜಿದಾರರ ಆಧಾರ್ ಕಾರ್ಡ್ ಸಂಖ್ಯೆಯನ್ನು ನಮೂದಿಸುವುದು
2. ಅರ್ಜಿದಾರರ ವಾಸಸ್ಥಳದ ವಿವರ:
   - **(i)** ವಿಳಾಸ*: ಅರ್ಜಿದಾರರ ವಾಸಸ್ಥಳ ವಿಳಾಸ ನಮೂದಿಸುವ ಸ್ಥಳದಲ್ಲಿ ಪತ್ರ ವ್ಯವಹಾರಕ್ಕಾಗಿ ವಿಳಾಸದ ಮಾಹಿತಿಯನ್ನು ಭರ್ತಿ ಮಾಡುವುದು.
   - **(ii)** ವಾಸ ಸ್ಥಳ*:
   - **(iii)** ತಾಲ್ಲೂಕು*:
   - **(iv)** ಜಿಲ್ಲೆ*:
3. ಫಲಾನುಭವಿಯ ಜಮೀನಿನ ವಿವರಗಳು
   - **(i)** ಹಳ್ಳಿ*:
   - **(ii)** ತಾಲ್ಲೂಕು*:
   - **(iii)** ಜಿಲ್ಲೆ*:
   - **(iv)** ಸರ್ವೆ ನಂ*: ಗೇಣಿ ಮತ್ತು ಪಹಣಿ ಪತ್ರ (**RTC)** ದಲ್ಲಿರುವಂತೆ ಸರ್ವೆ ನಂ ನಮೂದಿಸುವುದು.

**(v)** ಕೊಳವೆಬಾವಿಯು ವಿದ್ಯುತ್ ಸಂಪರ್ಕದಲ್ಲಿದೆಯೇ*: ಹೌದು/ಇಲ್ಲ (ಕೊಳವೆಬಾವಿಯು ಹಾಲಿ ವಿದ್ಯುತ್ ಸಂಪರ್ಕದಲ್ಲಿದ್ದರೆ, ಹೌದು ಎಂದು ಆಯ್ಕೆ ಮಾಡುವುದು. ಕೊಳವೆಬಾವಿಗೆ ವಿದ್ಯುತ್ ಸಂಪರ್ಕವಿಲ್ಲದಿದ್ದರೆ ಇಲ್ಲ ಎಂದು ಆಯ್ಕೆ ಮಾಡುವುದು).

**(vi)** ಕೊಳವೆ ಬಾವಿಯ ಒಟ್ಟಾರೆ ಆಳ: ಅಡಿಗಳಲ್ಲಿ ನಮೂದಿಸುವುದು. (ಎಂ.ಎನ್.ಆರ್.ಇ ನಿಗಧಿಪಡಿಸಿರುವಂತೆ, ನೀರೆತ್ತೆವು ಒಟ್ಟಾರೆ ಆಳವು 230 ಅಡಿಗಳಿಗೆ ಸೀಮಿತವಾಗಿರುತ್ತದೆ).

4. ಅರ್ಜಿದಾರರ ವಂತಿಗೆ ಪಾವತಿ ವಿವರಗಳು:

- ಸಾಮಾನ್ಯ ವರ್ಗದ ಫಲಾನುಭವಿಗಳ (ಅರ್ಜಿದಾರರು) ವಂತಿಗೆ, ರೂ. 1.00 ಲಕ್ಷ (ರೂ. ಒಂದು ಲಕ್ಷ)ವನ್ನು ಡಿ.ಡಿ ಮೂಲಕ ಅಥವಾ ನೇರವಾಗಿ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಪಾವತಿಸಬಹುದಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತ.
- ಡಿ.ಡಿ ಮೂಲಕ ಸಾಮಾನ್ಯ ವರ್ಗದ ಫಲಾನುಭವಿಗಳ ವಂತಿಗೆ ಪಾವತಿಸುವುದಾದರೆ ರೂ. ಒಂದು ಲಕ್ಷ ಮೊತ್ತಕ್ಕೆ **MD KREDL** ರವರ ಹೆಸರಿಗೆ ಡಿಡಿಯನ್ನು ಪಡೆದು ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವಾಗ ಡಿಡಿ ವಿವರಗಳನ್ನು ನಮೂದಿಸಬೇಕಾಗಿರುತ್ತದೆ.

  (i) ಡಿ.ಡಿ ಸಂಖ್ಯೆ * :

  (ii) ಡಿ.ಡಿ. ದಿನಾಂಕ* :

  (iii) ಬ್ಯಾಂಕ್ ಹೆಸರು*: ಡಿ.ಡಿ ಪಡೆದಿರುವ ಬ್ಯಾಂಕ ಹೆಸರನ್ನು ನಮೂದಿಸುವುದು

- ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಹಣ ಪಾವತಿಸುವುದಾದರೆ, ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಮೊದಲು ಈ ಕೆಳಕಂಡ **KREDL** ಬ್ಯಾಂಕ್ ಖಾತೆಗೆ ನೇರವಾಗಿ ಸಾಮಾನ್ಯ ವರ್ಗದ ಫಲಾನುಭವಿಗಳು ರೂ. ಒಂದು ಲಕ್ಷ ಮೊತ್ತವನ್ನು ಪಾವತಿಸುವುದು

  ಖಾತೆದಾರರ ಹೆಸರು : **Karnataka Renewable Energy Development Ltd,**

  ಖಾತೆ ಸಂಖ್ಯೆ : **546601010050485**

  ಬ್ಯಾಂಕ್ ಹೆಸರು : **Union Bank of India**

  ಬ್ಯಾಂಕ್ ಶಾಖೆ : **Ganganagar**

  ಖಾತೆ ಮಾದರಿ : **current account**

  ಐ.ಎಫ್.ಎಸ್.ಸಿ ಕೊಡ್ : **UBIN0554669**

  ಎಂ.ಐ.ಸಿ.ಆರ್ ಕೊಡ್ : **560026026**

- ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮುಖಾಂತರ ಫಲಾನುಭವಿಗಳ ವಂತಿಗೆ ಪಾವತಿಸಿದ್ದರೆ ಈ ಕೆಳಕಂಡ ವಿವರಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ನಮೂದಿಸುವುದು:

  **(i)** ಯು.ಟಿ.ಆರ್ ಸಂಖ್ಯೆ/ ಟ್ರಾನ್ಸಾಕ್ಷನ್ ಐ. ಡಿ ಸಂಖ್ಯೆ *

  **(ii)** ಟ್ರಾನ್ಸಾಕ್ಷನ್ ದಿನಾಂಕ*:

5. ಅರ್ಜಿದಾರರ ಬ್ಯಾಂಕ್ ಖಾತೆ ವಿವರ:
ಟಿಪ್ಪಣಿ: ಅರ್ಜಿಯಲ್ಲಿನ ದೋಷಗಳು, ತಪ್ಪು ಮಾಹಿತಿ ಮತ್ತು ಇತರೆ ಕಾರಣಗಳಿಂದ ತಿರಸ್ಕೃತಗೊಳ್ಳುವ ಅರ್ಜಿಗಳನ್ನು ಗಮನದಲ್ಲಿರಿಸಿ, ಶೇ. 5 ರಷ್ಟು ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಈ ಕಾರಣಗಳಿಂದಾಗಿ ಹೆಚ್ಚುವರಿ ಅಥವಾ ತಿರಸ್ಕೃತಗೊಂಡ ಅರ್ಜಿದಾರರ ವಂತಿಗೆಯನ್ನು ಹಿಂದಿರುಗಿಸುವ ಸಲುವಾಗಿ ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ತಪ್ಪದೇ ನಮೂದಿಸುವುದು.

| | | |
|---|---|---|
| **(i)** | ಖಾತೆದಾರರ ಹೆಸರು* | : |
| **(ii)** | ಖಾತೆ ಸಂಖ್ಯೆ* | : |
| **(iii)** | ಖಾತೆ ಮಾದರಿ (**savings/current/ od)*** | : |
| **(iv)** | ಬ್ಯಾಂಕ್ ಹೆಸರು* | : |
| **(v)** | ಬ್ಯಾಂಕ್ ಶಾಖೆ* | : |
| **(vi)** | ಐ.ಎಫ್.ಎಸ್.ಸಿ ಕೋಡ್* | : |

* ಚಿನ್ಹೆಯು ಕಡ್ಡಾಯವಾಗಿ ಮಾಹಿತಿಯನ್ನು ನಮೂದಿಸಬೇಕಾಗಿರುವ ಸೂಚನೆಯಾಗಿರುತ್ತದೆ

## ಆನ್‌ಲೈನ್ ಮುಖಾಂತರ ಅರ್ಜಿ ನೋಂದಾಯಿಸಿದ ನಂತರದ ಪ್ರಕ್ರಿಯೆ:

ಆನ್‌ಲೈನ್ ನಲ್ಲಿ ಅರ್ಜಿ ನೊಂದಾಯಿಸಿಕೊಂಡ ತಕ್ಷಣ, ಸ್ವೀಕೃತಿ ಪ್ರತಿಯನ್ನು (**acknowledgement copy**) ಮುದ್ರಿಸಿಕೊಂಡು, ಪ್ರತಿಯಲ್ಲಿ ಸಹಿ ಮಾಡಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ನಿಗಧಿತ ಸ್ಥಳದಲ್ಲಿ ಅಂಟಿಸಿ ಸಹಿಮಾಡುವುದು (ಒಂದು ಭಾವಚಿತ್ರವನ್ನು ಪ್ರತ್ಯೇಕವಾಗಿ ಸಲ್ಲಿಸುವುದು) ಮೂಲ ಡಿ.ಡಿ, ಆಧಾರ್ ಕಾರ್ಡ್ ಪ್ರತಿ, ಆರ್.ಟಿ.ಸಿ ಪ್ರತಿ, ಜಾತಿ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ) ಮತ್ತು ಜಲ ಇಳುವರಿ ಪ್ರಮಾಣ ಪತ್ರ, ಈ ಎಲ್ಲಾ ದಾಖಲೆಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಹಾರ್ಡ್ ಪ್ರತಿಯನ್ನು ಪರಿಶೀಲನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಐದು ದಿನಗಳೊಳಗಾಗಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಉಪ-ವಿಭಾಗೀಯ ಕಛೇರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆದುಕೊಳ್ಳುವುದು. ವಿಳಂಭವಾದಲ್ಲಿ, ಜೇಷ್ಠತಾ ಪಟ್ಟಿಯಂತೆ ಮುಂದಿನ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಸೂಚನೆ:

1. ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ **network/connectivity** ಗೆ ಸಂಬಂಧಿಸಿದ ತಾಂತ್ರಿಕ ತೊಂದರೆಗಳಿಗೆ ಕೆ.ಆರ್.ಇ.ಡಿ.ಎಲ್ ಜವಾಬ್ದಾರರಾಗಿರುವುದಿಲ್ಲ.
2. ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಗಳಾದ ಮೂಲ ಡಿ.ಡಿ, ಆರ್.ಟಿ.ಸಿ, ಆಧಾರ್ ಕಾರ್ಡ ಸಂಖ್ಯೆ, ಜಾತಿ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ) ತಾಳೆಯಾಗಬೇಕು. ತಾಳೆಯಾಗದಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾದ ದೂರವಾಣಿ **080–22202100**.

**********